# ವಜ್ರಮುಷ್ಠಿ ಕಾಳಗ

ಇದು ಆಜಾನುಬಾಹು ಜಟ್ಟಿಗಳ ಕಾಳಗ. ಕೈಗಳಿಗೆ ವಜ್ರನಖ ಧರಿಸಿ ಹೊಡೆದಾಡುವ ಸಾಹಸ ಕ್ರೀಡೆ. ಮೈಸೂರು ದಸರಾ ಸಂದರ್ಭದಲ್ಲಿ ಮಹಾರಾಜರ ಸಮಕ್ಷಮ ಅರಮನೆಯ ಆವರಣದಲ್ಲಿ ಶತ–ಶತಮಾನಗಳಿಂದ ಇಂದಿಗೂ ನಡೆಸಲಾಗುತ್ತದೆ. ಸ್ಪರ್ಧೆಯಲ್ಲಿ ಯಾರು ಮೊದಲು ಎದುರಾಳಿ ತಲೆಯಿಂದ ರಕ್ತ ಸುರಿಸುತ್ತಾರೋ ಅವರು ಜಯಶಾಲಿಯಾಗುತ್ತಾರೆ. ಇಂತಹ ರೋಚಕ ಕಾಳಗ 300 ವರ್ಷಗಳ ಹಿಂದೆ ಚಿತ್ರದುರ್ಗದಲ್ಲಿ ಮದಕರಿನಾಯಕನ ಕಾಲದಲ್ಲಿ ನಡೆಸುತ್ತಿದ್ದರು ಎಂಬುದಕ್ಕೆ ಈ ಚಿತ್ರ ಸಾಕ್ಷಿ. ಈ ಚಿತ್ರ ಎರಡನೇ ಸುತ್ತಿನ ಕೋಟೆಯ ಮಹಾದ್ವಾರದ ಗಾರೆ ಬಾಗಿಲಿನಲ್ಲಿದೆ. ಈ ಉಬ್ಬು ಚಿತ್ರ ಮಳೆ, ಗಾಳಿ, ಬಿಸಿಲಿಗೆ ತನ್ನ ತಾಜಾತನ ಕಳೆದುಕೊಂಡಿದೆ.

**-ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ**



# ಧಾನ್ಯದಿಂದ ನಂದಿ

ಶಿವಮೊಗ್ಗದಲ್ಲಿ ತೋಟಗಾರಿಕಾ ಇಲಾಖೆ ಇತ್ತೀಚೆಗೆ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಹುರುಳಿ, ಹೆಸರುಕಾಳು, ಜೋಳ ಮುಂತಾದ ಧಾನ್ಯಗಳಿಂದ ನಂದಿಯನ್ನು ರಚಿಸಲಾಗಿತ್ತು. ನೋಡಲು ಆಕರ್ಷಣೀಯವಾಗಿ ಎಲ್ಲರ ಕಣ್ಮನ ಸೆಳೆಯುತ್ತಿತ್ತು.

**-ಪ್ರಭಾ ಪಿ. ಶಾಸ್ತ್ರಿ, ಬೆಂಗಳೂರು**





# ರಾಜನ ಕಿವಿ ಕತ್ತೆಯ ಕಿವಿ

ಪ್ರಜೆಗಳನ್ನು ಪಾಲಿಸುವ ರಾಜನು ಎಲ್ಲರ ಮೊರೆಯನ್ನು ಆಲಿಸಬೇಕು. ಇದು ಎಲ್ಲ ರಾಜಕೀಯ ತಜ್ಞರ ನಿರೀಕ್ಷೆ. ಆದರೆ ರಾಜನಾದವನು ತನ್ನ ಸ್ವಂತ ಬುದ್ಧಿ ಬಿಟ್ಟು ಇನ್ನೊಬ್ಬರು ಹೇಳುವುದನ್ನೇ ಕೇಳುತ್ತಿದ್ದರೆ? ರಾಜನು ಕತ್ತೆ ಕಿವಿಯವನಾಗಿದ್ದರೆ? ಅಂತಹ ಚಿತ್ರವನ್ನು ಕೆಳದಿಯ ವೀರಭದ್ರ ದೇವಾಲಯದ ಗೋಡೆಯ ಮೇಲೆ ಉಬ್ಬು ಶಿಲ್ಪದಲ್ಲಿ ಕೆತ್ತಿದ್ದಾರೆ. ರಾಜನ ಕಿವಿ ಕತ್ತೆಕಿವಿಯಾಗಿದೆ ಈ ಶಿಲ್ಪದಲ್ಲಿ.

**-ಮಯೂರ್ ಎಸ್. ತಾಂಡೇಲ್, ಕುಂದಾಪುರ**